**ಸೂರ್ಯ:** ರಂಗ, ದುಶ್ಚಟಗಳ ಪರಿಣಾಮಗಳ ಬಗ್ಗೆ ಓದಿದೆ ಅಂತ ಹೇಳಿದೆಯಲ್ಲ ನಿನಗೆ ಏನನಿಸಿತು?
**ರಂಗ:** ಇಂಥ ಲೇಖನಗಳನ್ನು ಓದಲೇ ಬಾರದೆನಿಸಿತು.

***

**ಕೃಷ್ಣ:** ರವಿ, ಇವತ್ತು ನಾನು ಹೆಂಡ್ತಿಗೆ ಹಾಲು ಕಾಯಿಸಿಕೊಡಲು ಹೋಗಿ ಸುಮ್ಮನೆ ಬೈಸಿಕೊಂಡೆ.
**ರವಿ:** ಅಂಥದ್ದೇನಾಯ್ತು ಮಾರಾಯ?
**ಕೃಷ್ಣ:** ಹಾಲು ಅಂತ ತಿಳ್ಕೊಂಡು ದೋಸೆ ಹಿಟ್ಟಿನ ಪಾತ್ರೆಯನ್ನು ಸ್ಟೌ ಮೇಲೆ ಇಟ್ಟಿದ್ದೆ!

***

**ಶ್ರೀನಿವಾಸ:** ರಮೇಶ, ನೀನು ಮನೆಯಲ್ಲಿ ದಿನವೂ ತಬಲಾ ಬಾರಿಸುವುದನ್ನು ಅಭ್ಯಾಸ ಮಾಡ್ತಿದ್ದೆ ಅಲ್ಲಾ, ಈಗ ಏಕೆ ಮಾಡ್ತಾ ಇಲ್ಲ?
**ರಮೇಶ:** ಅಕ್ಕ ಪಕ್ಕದ ಮನೆಯವರೆಲ್ಲ, ನೀನು ತಬಲಾ ಅಭ್ಯಾಸ ಮಾಡೋದು ಬೇಡ ಅಂತ ಹೇಳಿ ತಿಂಗಳಿಗೆ ಇಷ್ಟು ದುಡ್ಡು ಅಂತ ಕೊಡ್ತಾ ಇದ್ದಾರೆ!

***

**ಬಾಲು:** ಕೇಶವ, ನಿನ್ನ ಹೆಂಡ್ತಿ ನೀನು ಅಡುಗೆ ಮಾಡೋದನ್ನೆಲ್ಲ ವಿಡಿಯೊ ಮಾಡಿ ಫೇಸ್ ಬುಕ್‌ಗೆ ಹಾಕಿದ್ದಾಳೆ.
**ಕೇಶವ:** ಹಾಕಲಿ ಬಿಡು, ಅದರಲ್ಲಿ ತಪ್ಪೇನು?
**ಬಾಲು:** ನಿನಗೆ ತಪ್ಪೇನಿಲ್ಲ, ಆದರೆ ಈಗ ನನ್ನ ಹೆಂಡ್ತಿ ಅಡುಗೆ ಮಾಡಿ ಅಂತ ಒತ್ತಾಯ ಮಾಡ್ತಾ ಇದ್ದಾಳೆ!

***

**ನ್ಯಾಯಾಧೀಶ:** ಏನಯ್ಯಾ, ನೀನು ಆತ್ಮಹತ್ಯೆಗೆ ಪ್ರಯತ್ನಿಸಿದ್ದು ನಿಜ ತಾನೆ?
**ಆತ:** ಹೌದು ಸ್ವಾಮಿ.
**ನ್ಯಾಯಾಧೀಶ:** ಹಾಗಾದರೆ, ಈಗ ನಿನಗೆ ಮರಣ ದಂಡನೆ ವಿಧಿಸಿದ್ದೇನೆ!

***

**ಗೋವಿಂದ:** ಕೃಷ್ಣ ಏಕೋ ಇವತ್ತು ಬೇಸರದಲ್ಲಿದ್ದೀಯೆ?
**ಕೃಷ್ಣ:** ನನ್ನ ಹೆಂಡ್ತಿ ಸೂಟ್‌ಕೇಸ್ ತೆಗೆದುಕೊಂಡು ತವರು ಮನೆಗೆ ಹೋಗಿದ್ದಾಳೆ.
**ಗೋವಿಂದ:** ತೆಗೆದುಕೊಂಡು ಹೋಗಲಿ ಬಿಡು, ಅದಕ್ಕೆ ಇಷ್ಟು ಬೇಸರನಾ?
**ಕೃಷ್ಣ:** ಹಾಗಲ್ಲ ಗೋವಿಂದ, ಆ ಸೂಟ್‌ಕೇಸ್‌ನಲ್ಲಿ ನನ್ನ ಗರ್ಲ್ ಫ್ರೆಂಡ್ ಫೋಟೊ ಇಟ್ಟಿದ್ದೆ ಕಣಯ್ಯಾ!


***

**ಯಜಮಾನ:** ಏಕೋ ಅಳ್ತಾ ಇದ್ದೀಯೆ?
ಕೆಲಸದ ಹುಡುಗ: ಅಮ್ಮಾವ್ರು, ನನ್ನ ಕಪಾಳಕ್ಕೆ ಹೊಡೆದರು ಸಾರ್!
**ಯಜಮಾನ:** ಇಷ್ಟಕ್ಕೆಲ್ಲ ಅಳ್ತಾರ, ನಿನ್ನ ಹಾಗೆ ನಾನು ಇಂಥದ್ದಕ್ಕೆಲ್ಲ ಅಳುವುದನ್ನು ಯಾವತ್ತಾದರೂ ನೋಡಿದ್ದೀಯಾ?

***


**ನಾಣಿ:** ಏನಯ್ಯಾ ಮುಕುಂದ, ಡೈವೋರ್ಸ್ ತೆಗೆದು ಕೊಂಡು ಮೇಲೆ ಬಹಳ ಖುಷಿಯಾಗಿದ್ದೀಯಲ್ಲ?
**ಮುಕುಂದ:** ಹೌದು, ಇನ್ಮೇಲೆ ನನ್ನ ಸಂಬಳದ ಅರ್ಧ ಭಾಗ ನನ್ನಲ್ಲೇ ಉಳಿಯುತ್ತಲ್ಲ!

***




ಈ ಚುನಾವಣೆಗಳು ಹತ್ತಿರ ಬಂದಂತೆ ಪಕ್ಷ ಪಕ್ಷಗಳೊಳಗೂ ಹಾವು ಏಣಿ ಆಟ ಶುರುವಾಗುತ್ತೆ ಮಾರಾಯ !!




ಆರು ಚಕ್ರದ ವಾಹನಕ್ಕೆ ವಿಮೆ ಮಾಡಿಸಿದ್ದರೆ ...ನಾಲ್ಕು ಚಕ್ರಕ್ಕೆ ಮಾಡಿಕೊಡ್ತಾಇದ್ದರು!!!

**ಆತ:** ಅಲ್ಲಯ್ಯಾ ಕುಡಿದ ಮೇಲೆ ಯಾಕೆ ಅಳ್ತಾ ಇದ್ದೀಯಲ್ಲ?
**ಈತ:** ಹುಡ್ಗೀನ ಮರೆಯಬೇಕು ಅಂತ ಕುಡಿದೆ, ಆ ಹುಡುಗಿ ಯಾರು ಅಂತ ನೆನಪಾಗ್ತಾ ಇಲ್ಲ!

***

**ಹೆಂಡತಿ:** ರೀ, ಗಂಡಸರು ಸತ್ತರೆ ಸ್ವರ್ಗದಲ್ಲಿ ಅಪ್ಸರೆಯರು ಸಿಗ್ತಾರಂತೆ?
**ಗಂಡ:** ಹೌದು ಕಣೆ.
**ಹೆಂಡತಿ:** ಹೆಂಡತಿಯರು ಸತ್ತರೆ?
**ಗಂಡ:** ಮಂಗ ಸಿಗುತ್ತೆ.
**ಹೆಂಡತಿ:** ನೀವು ಹೇಳೋದು ಸರಿ ಬಿಡಿ, ನಮಗೆ ಇಲ್ಲಿಯೂ ಮಂಗ ಅಲ್ಲಿಯೂ ಮಂಗ!

***

**ಹುಡುಗಿ:** ಆಕಾಶದಲ್ಲಿ ಮೋಡ ಕವಿದಾಗಲೆಲ್ಲಾ ನಿನ್ನ ನೆನಪಾಗುತ್ತೆ!?
**ಹುಡುಗ:** ಗೊತ್ತಾಯ್ತು ಬಿಡು, ನಿನ್ನ ಕೊಡೆ ನಮ್ಮ ಮನೆಯಲ್ಲಿದೆ!

***

**ಹೆಂಡತಿ:** ಹುಲಿ ಬೇಟೆಗೆ ಹೋಗ್ತಾ ಇದ್ದೀನಿ ಅಂತ ಹೇಳಿ ಇಲ್ಲಿಯೇ ನಿಂತಿದ್ದೀರಿ?
**ಗಂಡ:** ಬೀದಿಯಲ್ಲಿ ನಾಯಿ ನಿಂತಿದೆ, ಸ್ವಲ್ಪ ದೂರ ಓಡಿಸ ಬಾರೇ!

***

**ಮಗ:** ಅಮ್ಮ ನಾನು ಈ ಹೊಳೆಯಲ್ಲಿ ಈಜಲೇ?
**ಅಮ್ಮ:** ಖಂಡಿತ ಬೇಡ.
**ಮಗ:** ಮತ್ತೆ ಅಪ್ಪ ಈಜುತ್ತಿದ್ದಾರೆ?
**ಅಮ್ಮ:** ಅವರು ಇನ್ಶೂರೆನ್ಸ್ ಮಾಡಿಸಿದ್ದಾರೆ!

***

**ಪಂಕಜ:** ಕವಿತಾ ಎಷ್ಟು ವರ್ಷ ಆಯ್ತು ನಿನ್ನ ನೋಡಿ, ನಿನ್ನ ಮೈ ಮೇಲಿರುವ ಒಡವೆಗಳನ್ನು ನೋಡಿದರೆ ನಿನ್ನ ಗಂಡ ಕೆಲಸ ಬದಲಾಯಿಸಿ ದೊಡ್ಡ ಕೆಲಸಕ್ಕೆ ಸೇರಿದಂತಿದೆ!
**ಕವಿತಾ:** ಇಲ್ಲ ಪಂಕಜ, ನಾನು ಗಂಡನನ್ನೇ ಬದಲಾಯಿಸಿದೆ!

***

**ನಿರ್ದೇಶಕ:** ಈ ಕೋಲಿನಿಂದ ನಾಯಕನಿಗೆ ಒಂದು ಏಟು ಹೊಡಿಬೇಕು.
**ಖಳನಾಯಕ:** ಆ ವೇಳೆ ನಾಯಕ ಸುಮ್ಮನೆ ಇರ್ತಾನಾ ಸರ್!?
**ನಿರ್ದೇಶಕ:** ಇಲ್ಲ, ಅದೇ ಕೋಲಿನಿಂದ ನಿನಗೆ ನಾಲ್ಕು ಬಾರಿಸ್ತಾನೆ, ಆದ್ರೂ ನೀ ನಗ್ತಾನೆ ಇರಬೇಕು!

***

**ಪತ್ನಿ:** ಯಾಕ್ರಿ, ನಾನು ರೂಮಿಗೆ ಬಂದ ತಕ್ಷಣ ರೇಡಿಯೊ ನಿಲ್ಲಿಸಿ ಬಿಡ್ತಿರಲ್ಲಾ?
**ಪತಿ:** ಏಕಕಾಲಕ್ಕೆ ಎರಡು ರೇಡಿಯೊಗಳನ್ನು ಕೇಳುವುದಕ್ಕಾಗುವುದಿಲ್ಲ ಕಣೆ!

***

**ರವಿ:** ನಿನ್ನ ಜತೆ ಇರುವ ಈ ಹುಡುಗಿ ಯಾರು ನಾಣಿ?
**ನಾಣಿ:** ಈಕೆ ನನ್ನ ಚಿಕ್ಕಪ್ಪನ ಮಗಳು.
**ರವಿ:** ಹೌದಾ, ಕಳೆದ ಒಂದೆರಡು ತಿಂಗಳಲ್ಲಿ ನನ್ನ ಚಿಕ್ಕಪ್ಪನ ಮಗಳಾಗಿದ್ದಳು!

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ